## ತರಗತಿ: 02 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಕನ್ನಡ

| ಕ್ರ. ಸಂ. | ಕಲಿಕಾಂಶಗಳು/ ಕಲಿಕಾ ಫಲಗಳು | ಅಂಕಗಳು | ಮೌಲ್ಯಾಂಕನದ ಅಂಶಗಳು/ ಸೂಚನೆಗಳು |
|---|---|---|---|
| 1. | ಧ್ವನಿ ಸಂಕೇತಗಳ ಅರಿವು, ಅಕ್ಷರ–ಶಬ್ದ ಸಹ ಸಂಬಂಧ ಅರಿಯುವರು.<br><br>(ಕನ್ನಡ ವರ್ಣಮಾಲೆಯ ಅಕ್ಷರಗಳನ್ನು ಗುರುತಿಸುವರು.) | 3 | • ಅಕ್ಷರಗಳ ಧ್ವನಿ ಗಮನಿಸಲು ತಿಳಿಸುವುದು. ಚಿತ್ರಗಳನ್ನು ಪ್ರದರ್ಶಿಸಿ ಅವುಗಳ ಹೆಸರಿನ ಮೊದಲ ಅಕ್ಷರಗಳನ್ನು ಗುರುತಿಸಿ ಹೇಳಲು ಅವಕಾಶ ಕಲ್ಪಿಸಬಹುದಾಗಿದೆ.<br>• ಪ್ರತಿ ಮಗುವೂ ತಾನು ಕಲಿತ ಯಾವುದಾದರೂ 10 ಅಕ್ಷರಗಳನ್ನು/ ಕಾಗುಣಿತಾಕ್ಷರಗಳನ್ನು ಉಚ್ಚರಿಸಿ, ಅದರಿಂದ ಪ್ರಾರಂಭವಾಗುವ ಶಬ್ದಗಳನ್ನು ಹೇಳಲು ಅವಕಾಶ ಕಲ್ಪಿಸಬಹುದಾಗಿದೆ.<br>• ಸೂಚಿಸಿದ ಅಕ್ಷರಗಳನ್ನು ವಾರ್ತಾ ಪತ್ರಿಕೆಯಲ್ಲಿ/ ಮ್ಯಾಗಜಿನ್‌ಗಳಲ್ಲಿ ಗುರುತು ಮಾಡಬಹುದಾಗಿದೆ.<br>• ಅಕ್ಷರಗಳನ್ನು ಟ್ರೇಸ್ ಮಾಡಿ ಆ ಅಕ್ಷರವನ್ನು ಉಚ್ಚರಿಸಲು ಅವಕಾಶ ಕಲ್ಪಿಸಬಹುದಾಗಿದೆ.<br>• ಹೇಳಿದ ಸರಳ ಪದದ ಆರಂಭದ ಹಾಗೂ ಅಂತ್ಯದ ಅಕ್ಷರ ಹೇಳುವಂತೆ ತಿಳಿಸಬಹುದಾಗಿದೆ.<br>(ಅಕ್ಷರಗಳ ಗುರುತಿಸುವಿಕೆ, ಸರಿಯಾದ ಧ್ವನಿಯ ಉಚ್ಚಾರ, ಅಕ್ಷರ ಸಂಬಂಧಿತ ಪದಗಳನ್ನು ಆಧರಿಸಿ ಅಂಕಗಳನ್ನು ನಿರ್ಧರಿಸುವುದು) |
| 2. | ಪರಿಚಿತ ಸನ್ನಿವೇಶಗಳ ಚಿತ್ರಗಳನ್ನು ಅವಲೋಕಿಸಿ ಮಾತನಾಡುವರು. (ಕಲ್ಪಿಸಿ/ಊಹಿಸಿ ಮಾತನಾಡುವರು) | 3 | • ವಿವಿಧ ಸನ್ನಿವೇಶಗಳ ಚಿತ್ರಗಳನ್ನು ಸಂಗ್ರಹಿಸಿಟ್ಟುಕೊಂಡು, ಪ್ರತಿ ಮಗುವು ಯಾವುದಾದರೂ ಒಂದು ಸನ್ನಿವೇಶದ ಚಿತ್ರವನ್ನು ಅವಲೋಕಿಸಿ ಮಾತನಾಡಲು ಅವಕಾಶ ಕಲ್ಪಿಸಬಹುದಾಗಿದೆ.<br>• ಶಿಕ್ಷಕರು ಹೇಳಿದ ಸನ್ನಿವೇಶ ಅಥವಾ ಕಥೆಯನ್ನು ಆಲಿಸಿ, ಪುನಃ ತನ್ನದೇ ಮಾತುಗಳಲ್ಲಿ ಅಭಿವ್ಯಕ್ತಿಸಲು ಅವಕಾಶ ಕಲ್ಪಿಸಬಹುದಾಗಿದೆ.<br>• ಮಗುವು ತಾನು ಇಷ್ಟಪಟ್ಟ ಆಟಿಕೆಯ ಕುರಿತು ಮಾತನಾಡಲು ಅವಕಾಶ ಕಲ್ಪಿಸಬಹುದಾಗಿದೆ.<br>• ತರಗತಿ ಕೋಣೆಯಲ್ಲಿರುವ ಯಾವುದಾದರೂ ವಸ್ತುವಿನ ಬಗ್ಗೆ ಮಾತನಾಡುಲು ಅವಕಾಶ ಕಲ್ಪಿಸಬಹುದಾಗಿದೆ.<br>• ಮಗು ನೋಡಿರುವ ಯಾವುದಾದರೂ ಸನ್ನಿವೇಶ ಕುರಿತು ಸಮಯ ನಿಗದಿಪಡಿಸಿ ಮಾತನಾಡಲು ಮುಕ್ತ ಅವಕಾಶ ಕಲ್ಪಿಸಬಹುದಾಗಿದೆ.<br>(ಸ್ಪಷ್ಟ ಉಚ್ಚಾರಣೆ ಮತ್ತು ಸೂಕ್ತ ಅಭಿವ್ಯಕ್ತಿಯನ್ನು ಗಮನಿಸಿ ಅಂಕಗಳನ್ನು ನಿರ್ಧರಿಸುವುದು) |
| 3. | 3–4 ಅಕ್ಷರಗಳುಳ್ಳ ಪದಗಳ ಉಕ್ತಲೇಖನ ತೆಗೆದುಕೊಳ್ಳುವರು. (ಅಕ್ಷರಗಳು, ಗುಣಿತಾಕ್ಷರಗಳು ಹಾಗೂ ಜ್ಜ, ಟ್ಟ, ಣ್ಣ ಒತ್ತಕ್ಷರಗಳನ್ನು ಆಧರಿಸಿ) | 3 | • ಅಕ್ಷರಗಳು, ಗುಣಿತಾಕ್ಷರ ಹಾಗೂ ಒತ್ತಕ್ಷರಗಳನ್ನು ಒಳಗೊಂಡಂತೆ 3–4 ಅಕ್ಷರಗಳುಳ್ಳ ಪದಗಳ ಉಕ್ತಲೇಖನ ನೀಡಿ ಅವುಗಳನ್ನು ಓದಲು ಅವಕಾಶ ನೀಡಬಹುದಾಗಿದೆ.<br>• ನೀಡಿದ ಉಕ್ತಲೇಖನ ಪದಗಳನ್ನು ವಾರ್ತಾ ಪತ್ರಿಕೆಯಲ್ಲಿ /ಮ್ಯಾಗಜಿನ್/ ಓದುವೆ ನಾನು ಕಾರ್ಡು/ ಲಭ್ಯ ಸಾಹಿತ್ಯಗಳಲ್ಲಿ ಗುರುತು ಮಾಡಬಹುದಾಗಿದೆ.<br>• ಆಲಿಸಿದ ಪದ್ಯದಲ್ಲಿ ತನಗಿಷ್ಟವಾದ 5 ಅಥವಾ ಹೆಚ್ಚು ಪದಗಳನ್ನು ಬರೆದು, ಓದಲು ಅವಕಾಶ ಕಲ್ಪಿಸಬಹುದಾಗಿದೆ.<br>(ವಿವಿಧ ಪದಗಳ ರಚನೆ, ಬರವಣಿಗೆ ಹಾಗೂ ಶುದ್ಧತೆಯನ್ನು ಆಧರಿಸಿ ಅಂಕಗಳನ್ನು ನಿರ್ಧರಿಸುವುದು) |
| 4. | ಸೃಜನಾತ್ಮಕ ಸ್ವ–ಅಭಿವೃದ್ಧಿ, ಧ್ವನಿ ವಿಜ್ಞಾನದ ಅರಿವಿನೊಂದಿಗೆ ಪದ ಸಂಪತ್ತನ್ನು ಅಭಿವೃದ್ಧಿಪಡಿಸಿಕೊಳ್ಳುವರು. (ಅಕ್ಷರಗಳು, ಗುಣಿತಾಕ್ಷರಗಳು ಹಾಗೂ ಜ್ಜ, ಟ್ಟ, ಣ್ಣ ಒತ್ತಕ್ಷರಗಳನ್ನು ಆಧರಿಸಿ ಪದ ರಚಿಸುವರು) | 3 | • ಪದಜಾಲವನ್ನು ಸಿದ್ಧಪಡಿಸಿಕೊಂಡು ಅದರಲ್ಲಿ ವಿವಿಧ ಪದಗಳನ್ನು ಗುರುತಿಸಿ, ಬರೆಯಲು ಅವಕಾಶ ಕಲ್ಪಿಸಬಹುದಾಗಿದೆ.<br>• ಹೇಳಿದ ಪದಕ್ಕೆ ಪೂರಕವಾಗಿ, ಸೂಚಿಸಿದ ಧ್ವನಿಗೆ ಹೋಲಿಕೆಯಾಗುವಂತೆ ಹೆಚ್ಚಿನ ಪದಗಳನ್ನು ಹೇಳಿಸಿ, ಬರೆಯಲು ಅವಕಾಶ ಕಲ್ಪಿಸಬಹುದಾಗಿದೆ. ಉದಾ: ಅಮರ ಪದದಲ್ಲಿ ಮ ಧ್ವನಿಯನ್ನು ಸೂಚಿಸಿದರೆ...ಸಮಯ, ಭಾಮ, ಸಂಗಮ, ಮನುಜ ಇತ್ಯಾದಿ.<br>• ವಿವಿಧ ಅಕ್ಷರಗಳ ಮಿಂಚುಪಟ್ಟಿಗಳ ಗುಂಪುಗಳನ್ನು ನೀಡಿ, ಆ ಅಕ್ಷರಗಳ ಸಹಾಯದಿಂದ 3–4 ಅಕ್ಷರಗಳ ವಿವಿಧ ಪದಗಳನ್ನು ರಚಿಸಿ ಬರೆಯುವಂತೆ ತಿಳಿಸಬಹುದಾಗಿದೆ.<br>• ನೀಡಿದ ಪದದ ಅಂತ್ಯಾಕ್ಷರ ಬಳಸಿ ಪದಬಳ್ಳಿ ರಚಿಸಲು ಅವಕಾಶ ನೀಡಬಹುದಾಗಿದೆ. |

| | | | |
|---|---|---|---|
| | | | (ಪದಗಳ ಬರವಣಿಗೆ, ನಿಖರತೆಯನ್ನು ಆಧರಿಸಿ ಅಂಕಗಳನ್ನು ನಿರ್ಧರಿಸುವುದು) |
| **5.** | **ಪದಗಳಿಂದ ವಾಕ್ಯ ರಚನೆ ಮಾಡುವರು. (ಅಕ್ಷರಗಳು, ಗುಣಿತಾಕ್ಷರಗಳು ಹಾಗೂ ಜ್ಜ, ಟ್ಟ, ಣ್ಣ ಒತ್ತಕ್ಷರಗಳನ್ನು ಆಧರಿಸಿ)** | **3** | • ವಿವಿಧ ಪದಗಳ ಕೋಷ್ಟಕ ತಯಾರಿಸಿಕೊಂಡು ಅವುಗಳ ಸಹಾಯದಿಂದ ವಾಕ್ಯಗಳನ್ನು ರಚಿಸಲು ಅವಕಾಶ ಕಲ್ಪಿಸಬಹುದಾಗಿದೆ.<br>• ಪದ ಸುಳಿವುಗಳ ಆಧಾರದಲ್ಲಿ ವಾಕ್ಯ ರಚನೆಗೆ ಅವಕಾಶ ಕಲ್ಪಿಸಬಹುದಾಗಿದೆ. ಉದಾ: ಬಾಲಕ → ರೊಟ್ಟಿ → ತಿನ್ನು<br>• ಚಿತ್ರ ಪದ ಸುಳಿವುಗಳ ಆಧಾರದಲ್ಲಿ ವಾಕ್ಯ ರಚನೆಗೆ ಅವಕಾಶ ಕಲ್ಪಿಸಬಹುದಾಗಿದೆ.<br>• ಸನ್ನಿವೇಶದ ಚಿತ್ರವನ್ನು ಅವಲೋಕಿಸಿ ವಾಕ್ಯಗಳ ರಚನೆಗೆ ಅವಕಾಶ ಕಲ್ಪಿಸಬಹುದಾಗಿದೆ.<br>(ಬರೆದಿರುವ ಕನಿಷ್ಟ 3–4 ಅರ್ಥಪೂರ್ಣ ವಾಕ್ಯಗಳನ್ನು ಆಧರಿಸಿ ಅಂಕಗಳನ್ನು ನಿರ್ಧರಿಸುವುದು.) |

# ತರಗತಿ: 02 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಕನ್ನಡ – ಶಿಕ್ಷಕರ ವೈಯಕ್ತಿಕ ನಮೂದು ವಹಿ

| ಕ್ರ.ಸಂ | ಕಲಿಕಾ ಫಲಗಳು → | 1 | 2 | 3 | 4 | 5 | ಒಟ್ಟು ಅಂಕಗಳು | ಶೇಕಡಾ | ಶ್ರೇಣಿ |
|---|---|---|---|---|---|---|---|---|---|
| | ನಿಗದಿಪಡಿಸಿದ ಅಂಕಗಳು →<br>ವಿದ್ಯಾರ್ಥಿಗಳ ಹೆಸರು ↓ | 03 | 03 | 03 | 03 | 03 | | | |
| 01 | | | | | | | | | |
| 02 | | | | | | | | | |
| 03 | | | | | | | | | |
| 04 | | | | | | | | | |
| 05 | | | | | | | | | |
| 06 | | | | | | | | | |
| 07 | | | | | | | | | |
| 08 | | | | | | | | | |
| 09 | | | | | | | | | |
| 10 | | | | | | | | | |
| 11 | | | | | | | | | |
| 12 | | | | | | | | | |
| 13 | | | | | | | | | |
| 14 | | | | | | | | | |
| 15 | | | | | | | | | |

ವಿಷಯ ಶಿಕ್ಷಕರ ಸಹಿ

ಮುಖ್ಯಶಿಕ್ಷಕರ ಸಹಿ

## ತರಗತಿ: 03 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಕನ್ನಡ

| ಕ್ರ. ಸಂ. | ಕಲಿಕಾಂಶ/ ಕಲಿಕಾ ಫಲಗಳು | ಅಂಕಗಳು | ಮೌಲ್ಯಾಂಕನದ ಅಂಶಗಳು/ ಸೂಚನೆಗಳು |
|---|---|---|---|
| 1. | ಪರಿಚಿತ ಸನ್ನಿವೇಶಗಳ ಚಿತ್ರಗಳನ್ನು ಅವಲೋಕಿಸಿ ಮಾತನಾಡುವರು. (ಕಲ್ಪಿಸಿ/ ಊಹಿಸಿ ಮಾತನಾಡುವರು) | 03 | • ಪರಿಚಿತ ಸನ್ನಿವೇಶಗಳ ಚಿತ್ರಗಳನ್ನು ಸಂಗ್ರಹಿಸಿಟ್ಟುಕೊಂಡು, ಪ್ರತಿ ಮಗುವು ಯಾವುದಾದರೂ ಒಂದು ಸನ್ನಿವೇಶದ ಚಿತ್ರವನ್ನು ಅವಲೋಕಿಸಿ ಮಾತನಾಡಲು ಅವಕಾಶ ಕಲ್ಪಿಸಬಹುದಾಗಿದೆ. ಉದಾ: ಹಳ್ಳಿ, ಕೃಷಿ, ನಗರ ಪ್ರದೇಶ, ಸಂತೆ, ದಿನಾಚರಣೆಗಳು ಇತ್ಯಾದಿ.<br>• ಚಿತ್ರಸರಣಿ (ಕಥೆ/ ಸನ್ನಿವೇಶ)ಗಳನ್ನು ಬಳಸಿಕೊಂಡು ಅವುಗಳ ಬಗ್ಗೆ ಮಾತನಾಡಿಸಬಹುದಾಗಿದೆ. ಉದಾ: ಕಥೆಗಳ ಚಾರ್ಟ್, ಕಥಾಪುಸ್ತಕ, ಸನ್ನಿವೇಶದ ಕಾರ್ಡುಗಳು, ವ್ಯಂಗ್ಯ ಚಿತ್ರ ಇತ್ಯಾದಿ.<br>• ತನ್ನ ಇಷ್ಟದ ವಸ್ತು/ ಆಟಿಕೆಗಳನ್ನು ಬಳಸಿಕೊಂಡು ಅವುಗಳು ತಾನೇ ಎಂದು ಭಾವಿಸಿಕೊಂಡು ಮಾತನಾಡುವಂತೆ ಮಾಡಬಹುದಾಗಿದೆ.<br>• ತರಗತಿ ಕೋಣೆಯಲ್ಲಿರುವ ಯಾವುದಾದರೂ ವಸ್ತುವಿನ ಬಗ್ಗೆ ಮಾತನಾಡುಲು ಅವಕಾಶ ಕಲ್ಪಿಸಬಹುದಾಗಿದೆ.<br>• ಚಿತ್ರಗಳ ಬಗ್ಗೆ ಮಾತನಾಡಲು ಅಗತ್ಯ ಸೂಚನೆಗಳನ್ನು ನೀಡಿ, ಸಮಯ ನಿಗದಿಪಡಿಸಿ ಮಾತನಾಡಲು ಮುಕ್ತ ಅವಕಾಶ ನೀಡುವುದು. (ಸ್ಪಷ್ಟ ಉಚ್ಚಾರಣೆ ಮತ್ತು ಸೂಕ್ತ ಅಭಿವ್ಯಕ್ತಿಯನ್ನು ಗಮನಿಸಿ ಅಂಕಗಳನ್ನು ನಿರ್ಧರಿಸುವುದು) |
| 2. | ಎಫ್.ಎಲ್.ಎನ್ ಚಟುವಟಿಕೆ ಆಧಾರಿತವಾಗಿ ಹಿಂದಿನ ತರಗತಿಯ ಅಕ್ಷರ, ಗುಣಿತಾಕ್ಷರ, ಒತ್ತಕ್ಷರಗಳು, ಪದ, ವಾಕ್ಯ, ಸರಳ ಕಥೆಗಳನ್ನು ಓದುವರು. | 03 | • ಅಕ್ಷರಗಳು, ಗುಣಿತಾಕ್ಷರಗಳು, ಒತ್ತಕ್ಷರಗಳು, ಪದಗಳು, ವಾಕ್ಯಗಳು, ಸರಳ ಕಥೆಗಳು ಮುಂತಾದವುಗಳನ್ನು ಓದಿಸಬಹುದಾಗಿದೆ. ಉದಾ: 1 ಮತ್ತು 2ನೇ ತರಗತಿಯ ಚಿತ್ರಪದ ಮತ್ತು ಸಾಧನ ಕಾರ್ಡುಗಳು, ವಾಚಕಗಳು, ಓದುವೆ ನಾನು ಕಾರ್ಡುಗಳು ಮತ್ತು ಸರಳ ಕಥೆ ಪುಸ್ತಕಗಳು ಇತ್ಯಾದಿ.<br>• ಮಕ್ಕಳ ನಿಯತಕಾಲಿಕೆಗಳನ್ನು ಓದಿಸಬಹುದಾಗಿದೆ.<br>• ದಿನಪತ್ರಿಕೆಯ ಮುಖ್ಯಾಂಶಗಳು, ಶಾಲಾ ಪ್ರದರ್ಶನ ಫಲಕಗಳಲ್ಲಿನ ಅಂಶಗಳನ್ನು ಓದಿಸಬಹುದಾಗಿದೆ.<br>(ಸ್ಪಷ್ಟ ಉಚ್ಚಾರಣೆ, ಧ್ವನಿಯ ಏರಿಳಿತ, ಓದುವ ವೇಗ ಹಾಗೂ ಹಾವಭಾವಗಳನ್ನು ಆಧರಿಸಿ ಅಂಕಗಳನ್ನು ನಿರ್ಧರಿಸುವುದು) |
| 3. | 3–4 ಅಕ್ಷರಗಳುಳ್ಳ ಪದಗಳ ಉಕ್ತಲೇಖನ ತೆಗೆದುಕೊಳ್ಳುವರು. | 03 | • ಅಕ್ಷರಗಳು, ಗುಣಿತಾಕ್ಷರ ಹಾಗೂ ಒತ್ತಕ್ಷರಗಳನ್ನು ಒಳಗೊಂಡಂತೆ 3–4 ಅಕ್ಷರಗಳುಳ್ಳ ಪದಗಳ ಉಕ್ತಲೇಖನ ನೀಡಿ ಅವುಗಳನ್ನು ಓದಲು ಅವಕಾಶ ನೀಡಬಹುದಾಗಿದೆ.<br>• ನೀಡಿದ ಉಕ್ತಲೇಖನ ಪದಗಳನ್ನು ದಿನ ಪತ್ರಿಕೆಯಲ್ಲಿ/ ಮಕ್ಕಳ ನಿಯತಕಾಲಿಕೆಗಳಲ್ಲಿ ಗುರುತು ಮಾಡಿಸಬಹುದಾಗಿದೆ.<br>• ಆಲಿಸಿದ ಪಠ್ಯದಲ್ಲಿ ತನಗಿಷ್ಟವಾದ 5 ಅಥವಾ ಹೆಚ್ಚು ಪದಗಳನ್ನು ಬರೆದು, ಓದಲು ಅವಕಾಶ ಕಲ್ಪಿಸಬಹುದಾಗಿದೆ. (ವಿವಿಧ ಪದಗಳ ರಚನೆ, ಬರವಣಿಗೆ ಹಾಗೂ ಶುದ್ಧತೆಯನ್ನು ಆಧರಿಸಿ ಅಂಕಗಳನ್ನು ನಿರ್ಧರಿಸುವುದು)<br>• ಗೆಳೆಯರು ಹೇಳಿದ 3–4 ಅಕ್ಷರಗಳುಳ್ಳ ಪದಗಳನ್ನು ಬರೆಸಬಹುದಾಗಿದೆ.<br>• ದಿನಪತ್ರಿಕೆಯನ್ನು ಮಕ್ಕಳಿಗೆ ನೀಡಿ, ಶಿಕ್ಷಕರು ಹೇಳಿದ ಪದಗಳನ್ನು, ವಾಕ್ಯಗಳನ್ನು ಗುರುತಿಸಿ ಬಣ್ಣ ಹಾಕುವಂತೆ ಮಾಡಬಹುದಾಗಿದೆ.<br>(ಅಕ್ಷರಗಳು, ಗುಣಿತಾಕ್ಷರಗಳು, ಒತ್ತಕ್ಷರಗಳುಳ್ಳ 3–4 ಅಕ್ಷರಗಳ ಅರ್ಥಪೂರ್ಣ ಪದಗಳ ಬರವಣಿಗೆಯನ್ನು ಆಧರಿಸಿ ಅಂಕಗಳನ್ನು ನೀಡಬಹುದಾಗಿದೆ.) |
| 4. | ಅಕ್ಷರಗಳಿಂದ ಪದರಚನೆ, | 03 | • ಗುಣಿತಾಕ್ಷರ ಮತ್ತು ಒತ್ತಕ್ಷರಗಳುಳ್ಳ ಕೆಲವೊಂದು ಅಕ್ಷರಗಳನ್ನು ನೀಡಿ, ಅವುಗಳಿಂದ ಪದಗಳನ್ನು ಮತ್ತು ವಾಕ್ಯಗಳನ್ನು ರಚನೆ ಮಾಡಿಸಬಹುದಾಗಿದೆ. |

| | | | |
|---|---|---|---|
| | ಪದಗಳಿಂದ ವಾಕ್ಯ ರಚನೆ ಮಾಡುವರು. | | • ಅಕ್ಷರ, ಗುಣಿತಾಕ್ಷರ ಮತ್ತು ಒತ್ತಕ್ಷರಗಳುಳ್ಳ ಪದಗಳ ಕೋಷ್ಟಕ ತಯಾರಿಸಿಕೊಂಡು ಅವುಗಳ ಸಹಾಯದಿಂದ ವಾಕ್ಯಗಳನ್ನು ರಚಿಸಲು ಅವಕಾಶ ಕಲ್ಪಿಸಬಹುದಾಗಿದೆ.<br>• ಆರಂಭದ ಮತ್ತು ಅಂತ್ಯದ ಪದಗಳ ಸಹಾಯದಿಂದ ಪದ ಮತ್ತು ವಾಕ್ಯ ರಚನೆಗೆ ಅವಕಾಶ ಕಲ್ಪಿಸಬಹುದಾಗಿದೆ. ಉದಾ: ಬಾಲಕ → ರೊಟ್ಟಿ → ತಿನ್ನು.... ಬಾಲಕ ರೊಟ್ಟಿ ತಿನ್ನುತ್ತಿದ್ದಾನೆ.<br>• ಚಿತ್ರ ಪದ ಸುಳಿವುಗಳ ಆಧಾರದಲ್ಲಿ ವಾಕ್ಯ ರಚನೆಗೆ ಅವಕಾಶ ಕಲ್ಪಿಸಬಹುದಾಗಿದೆ.<br>• ಸನ್ನಿವೇಶದ ಚಿತ್ರವನ್ನು ಅವಲೋಕಿಸಿ ವಾಕ್ಯಗಳ ರಚನೆಗೆ ಅವಕಾಶ ಕಲ್ಪಿಸಬಹುದಾಗಿದೆ.<br>(ಕನಿಷ್ಠ 3–4 ಅರ್ಥಪೂರ್ಣ ಪದಗಳು ಮತ್ತು ವಾಕ್ಯಗಳನ್ನು ಆಧರಿಸಿ ಅಂಕಗಳನ್ನು ನಿರ್ಧರಿಸುವುದು) |
| 5. | ವಾಕ್ಯ/ ವಾಕ್ಯ ಖಂಡಿಕೆಗಳನ್ನು ಆಲಿಸಿ ಬರೆಯುವರು. | 03 | • ಸರಳ ಕಥೆಗಳಲ್ಲಿನ 3–4 ವಾಕ್ಯ ಖಂಡಿಕೆಗಳನ್ನು ಉಕ್ತಲೇಖನ ನೀಡಬಹುದಾಗಿದೆ.<br>• ಶಿಕ್ಷಕರು ಹೇಳಿದ ಸನ್ನಿವೇಶ ಅಥವಾ ಕಥೆಯನ್ನು ಆಲಿಸಿ, ಬರೆಯಲು ಅವಕಾಶ ಕಲ್ಪಿಸಬಹುದಾಗಿದೆ.<br>• ಸರಳ ಕಥೆಗಳ/ ಶಿಶುಗೀತೆಗಳ ಆಡಿಯೋವನ್ನು ಕೇಳಿಸಿ, ಬರೆಯುವಂತೆ ಮಾಡಬಹುದಾಗಿದೆ.<br>• ವಾಚಕಗಳನ್ನು ಇತರ ಮಕ್ಕಳಿಂದ ಓದಿಸಿ, ವಾಕ್ಯಗಳನ್ನು ಬರೆಯುವಂತೆ ಮಾಡಬಹುದಾಗಿದೆ.<br>• ಶಾಲಾ ಪ್ರಾರ್ಥನಾ ಸಮಯದಲ್ಲಿ ಆಲಿಸಿದ ಗಾದೆಗಳು, ಒಗಟುಗಳು, ನುಡಿಮುತ್ತುಗಳನ್ನು ಬರೆಯಲು ಅವಕಾಶ ಕಲ್ಪಿಸಬಹುದಾಗಿದೆ.<br>(ಅರ್ಥಪೂರ್ಣ ವಾಕ್ಯಗಳ ರಚನೆಯನ್ನು ಆಧರಿಸಿ ಅಂಕಗಳನ್ನು ನಿರ್ಧರಿಸುವುದು) |

## ತರಗತಿ: 03 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಕನ್ನಡ – ಶಿಕ್ಷಕರ ವೈಯಕ್ತಿಕ ನಮೂದು ವಹಿ

| ಕ್ರಸಂ | ಕಲಿಕಾ ಫಲಗಳು → | 1 | 2 | 3 | 4 | 5 | ಒಟ್ಟು ಅಂಕಗಳು | ಶೇಕಡಾ | ಶ್ರೇಣಿ |
|---|---|---|---|---|---|---|---|---|---|
| | ನಿಗದಿಪಡಿಸಿದ ಅಂಕಗಳು → ವಿದ್ಯಾರ್ಥಿಗಳ ಹೆಸರು ↓ | 03 | 03 | 03 | 03 | 03 | | | |
| 01 | | | | | | | | | |
| 02 | | | | | | | | | |
| 03 | | | | | | | | | |
| 04 | | | | | | | | | |
| 05 | | | | | | | | | |
| 06 | | | | | | | | | |
| 07 | | | | | | | | | |
| 08 | | | | | | | | | |
| 09 | | | | | | | | | |
| 10 | | | | | | | | | |
| 11 | | | | | | | | | |
| 12 | | | | | | | | | |
| 13 | | | | | | | | | |
| 14 | | | | | | | | | |
| 15 | | | | | | | | | |

ವಿಷಯ ಶಿಕ್ಷಕರ ಸಹಿ

ಮುಖ್ಯಶಿಕ್ಷಕರ ಸಹಿ